# ರಾಮಾಯಣ

ರಾಮಾಯಣ ಹಿಂದೂಗಳ ಪವಿತ್ರ ಗ್ರಂಥಗಳಲ್ಲಿ ಮುಖ್ಯವಾದುದು. ಈ ಗ್ರಂಥವು ವಾಲ್ಮೀಕಿ ಮಹರ್ಷಿಗಳಿಂದ ರಚಿಸಲ್ಪಟ್ಟಿದೆ. ಇದು ಭಾರತದ ಸಾಹಿತ್ಯದ ಒಂದು ಮಹಾಕಾವ್ಯ. ವಾಲ್ಮೀಕಿ ರಾಮಾಯಣದಲ್ಲಿ ಬರೆದ ಮಾಹಿತಿಯ ಪ್ರಕಾರ ರಾಮ, ಲಕ್ಷ್ಮಣ ಮತ್ತು ಸೀತೆಯ ವ್ಯಕ್ತಿತ್ವ ಹಾಗೂ ಧರ್ಮ ಮಾರ್ಗವನ್ನು ವಿವರಿಸುತ್ತದೆ. ವಾಲ್ಮೀಕಿ ರಾಮಾಯಣದ ಪ್ರಕಾರ ಮಹಾ ಕಾವ್ಯವು 24,000 ಶ್ಲೋಕಗಳನ್ನು ಹೊಂದಿದೆ. 500 ಉಪಖಂಡ ಮತ್ತು 7 ಉತ್ತರಕಾಂಡಗಳನ್ನು ಒಳಗೊಂಡಿದೆ.

**ಶ್ರೀ ರಾಮಚಂದ್ರ** - ಶ್ರೀ ರಾಮಚಂದ್ರ ಸೂರ್ಯವಂಶದ ಅಯೋಧ್ಯೆಯ ದಶರಥ ಮಹಾರಾಜ ಮತ್ತು ಕೌಶಲ್ಯೆಯ ಪುತ್ರ. ಶ್ರೀ ರಾಮನ ಪತ್ನಿ ಸೀತೆ. ಅವರಿಗೆ ಲವ, ಕುಶರೆಂಬ ಇಬ್ಬರು ಮಕ್ಕಳು.ಶ್ರೀ ರಾಮಚಂದ್ರ ಹಿಂದೂ ಧರ್ಮದಲ್ಲಿ ಪೂಜ್ಯ ದೇವತೆಯಾಗಿದ್ದು, ಅವರ ಸದಾಚಾರ, ಭಕ್ತಿ, ಸತ್ಯ ಮತ್ತು ನ್ಯಾಯದ ಬದ್ಧತೆಗೆ ಹೆಸರುವಾಸಿಯಾಗಿದ್ದಾರೆ. ಅವರ ಜೀವನ ಮತ್ತು ಬೋಧನೆಗಳು ಆಧ್ಯಾತ್ಮಿಕ ಜ್ಞಾನೋದಯ ಮತ್ತು ನೈತಿಕ ಮಾರ್ಗದರ್ಶನವನ್ನು ಬಯಸುವ ಲಕ್ಷಾಂತರ ಜನರಿಗೆ ಮಾರ್ಗದರ್ಶಕವಾಗಿ ಕಾರ್ಯನಿರ್ವಹಿಸುತ್ತಿವೆ. ಶ್ರೀ ರಾಮಚಂದ್ರನ ರಾಜ್ಯಾಡಳಿತವು ಜನಜನಿತವಾಗಿದೆ. ಅವನ ಆಡಳಿತಾವಧಿಯು "**ರಾಮರಾಜ್ಯ**" ಎಂದು ಪ್ರಸಿದ್ಧಿ ಪಡೆದಿದೆ.

**ಸೀತೆ** - ಸೀತೆಯು ಹಿಂದೂ ಧರ್ಮಗ್ರಂಥಗಳಲ್ಲಿ ಒಂದಾದ ರಾಮಾಯಣದಲ್ಲಿನ ಶ್ರೀ ರಾಮನ ಹೆಂಡತಿ ಮತ್ತು ಮಿಥಿಲೆಯ ರಾಜನಾದ ಜನಕನ ಮಗಳು. ಸೀತೆಯನ್ನು ಜಾನಕಿ ಎಂದೂ ಕರೆಯುತ್ತಾರೆ. ಸೀತೆಯು ರಾಮನನ್ನು ಹಿಂಬಾಲಿಸಿ ವನವಾಸಕ್ಕೆ ಹೊರಡುತ್ತಾಳೆ. ಅಲ್ಲಿ ರಾವಣನಿಂದ ಅಪಹರಣಕ್ಕೆ ಒಳಗಾಗುತ್ತಾಳೆ. ಸೀತೆಯು ಪತಿವ್ರತೆ. ಸೀತೆ ತನ್ನ ಸಮರ್ಪಣೆ, ಸ್ವಯಂ ತ್ಯಾಗ, ಧೈರ್ಯ ಮತ್ತು ಶುದ್ಧತೆಗೆ ಹೆಸರುವಾಸಿಯಾಗಿದ್ದಾಳೆ.

**ಲಕ್ಷ್ಮಣ** - ಲಕ್ಷ್ಮಣ ಶ್ರೀರಾಮನ ತಮ್ಮ. ಸೂರ್ಯವಂಶದ ಅಯೋಧ್ಯೆಯ ದಶರಥ ಮಹಾರಾಜ ಮತ್ತು ಸುಮಿತ್ರೆಯ ಪುತ್ರ. ಶತ್ರುಘ್ನ ಇವನ ಅವಳಿ ತಮ್ಮ. ರಾಮ ವನವಾಸಕ್ಕೆಂದು ಹೊರಟಾಗ ಲಕ್ಷ್ಮಣನೂ ಅವನನ್ನು ಹಿಂಬಾಲಿಸುತ್ತಾನೆ. ಕಾಡಿನಲ್ಲಿದ್ದಷ್ಟೂ ದಿನ ತನ್ನ ಅಣ್ಣ ಅತ್ತಿಗೆಯರಾದ ರಾಮ ಮತ್ತು ಸೀತೆಯ ಸೇವೆ ಮಾಡುತ್ತಿರುತ್ತಾನೆ.

ರಾಮಾಯಣದಲ್ಲಿ ರಾಮನ ಪಾತ್ರಕ್ಕೆ ಎಷ್ಟು ಪ್ರಮುಖ ಸ್ಥಾನವಿದೆಯೋ ಲಕ್ಷ್ಮಣನಿಗೂ ಅಷ್ಟೇ ಪ್ರಮುಖವಾದ ಸ್ಥಾನವಿದೆ.

**ಹನುಮಂತ** - ರಾಮಾಯಣದಲ್ಲಿನ ಪ್ರಮುಖ ಪಾತ್ರಗಳಲ್ಲೊಬ್ಬ ಹಾಗೂ ಹಿಂದು ದೇವತೆಗಳಲ್ಲಿ ಒಬ್ಬ. ಹನುಮಂತನನ್ನು ವಾಯುಪುತ್ರ, ಕಪಿವೀರ, ಆಂಜನೇಯ, ಹನುಮಾನ್‌ನೆಂದು ಕರೆಯುತ್ತಾರೆ. ಹನುಮಂತನು ಕೇಸರಿ ಎಂಬ ವಾನರ ಮತ್ತು ಅಂಜನಾದೇವಿಯ ಮಗ ಮತ್ತು ರಾಮನ ಪರಮಭಕ್ತ. ಶಕ್ತಿಯ ದೇವತೆಯೆಂದು ಹನುಮಂತನನ್ನು ಪೂಜಿಸಲಾಗುತ್ತದೆ. ಹನುಮಂತನು ಹಿಂದೂ ಧರ್ಮದಲ್ಲಿ ಪ್ರಮುಖ ದೈವ ಮತ್ತು ಸೇವಕನಾದ ದೇವತೆ. ಹನುಮಂತನ ಪಾತ್ರ ಮತ್ತು ಕಾರ್ಯಗಳು ಹಿಂದೂ ಸಂಸ್ಕೃತಿಗೆ ಅತ್ಯಂತ ಪ್ರಮುಖ ಆಧಾರಗಳು.

**ರಾವಣ** - ರಾವಣ ಮಹಾನ್ ಶಿವಭಕ್ತನಾಗಿದ್ದರು. ರಾವಣನ ಹೆಂಡತಿ ಮಂಡೋದರಿ. ರಾವಣನಿಗೆ ೧೨ ತಲೆಗಳು ಇದ್ದವು. ಅವನನ್ನು ದಶಾನನ ಎಂದು ಕರೆಯುತ್ತಾರೆ. ಅವನು ರಾಮನ ಪತ್ನಿ ಸೀತೆಯನ್ನು ಅಪಹರಿಸಿದವನು, ಅಶೋಕ ವನದಲ್ಲಿ ಆಕೆಯನ್ನು ಸೆರೆಯಾಳಾಗಿ ಇಟ್ಟುಕೊಂಡವನು, ತದನಂತರ ಮಾಡಿದ ಪಾಪಕ್ಕೆ ಪ್ರಾಯಶ್ಚಿತವೆಂಬಂತೆ ರಾಮನಿಂದ ಕೊಲ್ಲಲ್ಪಟ್ಟನು.